ಡಿ.ಡಬ್ಲುಃ 1

ಸಾಕ್ಷಿಯನ್ನು ಕರೆಸಿ ಪ್ರಮಾಣಿಕರೀಸಲಾಯಿತು.

ದಿನಾಂಕಃ 03-03-2023.

**ಮುಂದುವರಿದ ಪಾಟೀಸವಾಲುಃ ವಾದಿಗಳ ಪರ ಶ್ರೀ ಕೆ.ಆರ್.ಎನ್ ವಕೀಲರಿಂದ,**

1 ನೇ ವಾದಿ ನನ್ನ ತಮ್ಮನ ಮಗನಾಗಬೇಕು. 2 ನೇ ವಾದಿ ನನ್ನ ತಮ್ಮನ ಹೆಂಡತಿ. 3 ನೇ ವಾದಿ ನನ್ನ ತಾಯಿ. ಅವರು ಈ ದಾವೆ ಹಾಕಿ 2 ವರ್ಷಗಳ ನಂತರ ಮರಣ ಹೊಂದಿರುತ್ತಾರೆ. 4 ನೇ ವಾದಿ ನನ್ನ ಮೂರನೇ ಸಹೋದರನಾಗಬೇಕು. 5 ನೇ ವಾದಿ ನನ್ನ ಸಹೋದರಿಯಾಗಬೇಕು. ನಾನು ನಮ್ಮ ಕುಟುಂಬದಲ್ಲಿ ಹಿರಿಯವನು ಎಂದರೆ ಸರಿ. ನನ್ನ ತಂದೆ ಸೋಮಯ್ಯ ಸನ್ 2014 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ 2 ನೇ ಸಹೋದರ ವೆಂಕಟರಮಣ 4-5 ವರ್ಷಗಳ ಹಿಂದೆ ಮೃತಹೊಂದಿರುತ್ತಾರೆ. ವೆಂಕಟರಮಣನ ಹೆಂಡತಿ ಹೆಸರು ಮಂಜಮ್ಮ ಮತ್ತು ಮಗ ಪ್ರದೀಪ 4 ನೇ ಪ್ರತಿವಾದಿ ಎಂದರೆ ಸರಿ. ನನ್ನ 3 ನೇ ತಮ್ಮ ಈಶ್ವರ ವಾಹನ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಆತನು ಅಂದಾಜು 25 ವರ್ಷಗಳ ಹಿಂದೆ ಮರಣ ಹೊಂದಿರುತ್ತಾನೆ. ಈಶ್ವರನಿಗೆ 1 ಮತ್ತು 2 ನೇ ವಾದಿಯರು ಮಾತ್ರ ವಾರಸುದಾರರು ಎಂದರೆ ಸರಿ. ನನ್ನ ತಂದೆ ಸೋಮಯ್ಯನಿಗಿಂತ ಮೊದಲು ಆತನ ತಮ್ಮ ದುರ್ಗಪ್ಪ ಮೃತ ಹೊಂದಿರುತ್ತಾನೆ. ದುರ್ಗಪ್ಪನ ಹೆಂಡತಿ ಹಿರಿಯಕ್ಕ ಈ ಪ್ರಕರಣದ 5 ನೇ ಪ್ರತಿವಾದಿ ಎಂದರೆ ಸರಿ. 6 ರಿಂದ 10 ನೇ ಪ್ರತಿವಾದಿಯರು ಮೃತ ದುರ್ಗಪ್ಪ ಮತ್ತು 5 ನೇ ಪ್ರತಿವಾದಿಯ ವಾರಸುದಾರರು ಎಂದರೆ ಸರಿ. ನನ್ನ ಅಜ್ಜನಿಗೆ ಈರಾ ಅಲಿಯಾಸ್ ಬೋಳಾ ವೆಂಕಟರಮಣ ನಾಯ್ಕ ಎಂದು ಹೆಸರಿನಿಂದ ಕರೆಯುತ್ತಿದ್ದರು ಎಂದರೆ ಸರಿ. ನನ್ನ ಅಜ್ಜಿಯ ಹೆಸರು ಜಟ್ಟು ಎಂದರೆ ನನಗೆ ಗೊತ್ತಿಲ್ಲ. ನನ್ನ ಅಜ್ಜಿಯ ಹೆಸರು ಜಟ್ಟು ಈರಾ ಯಾನೆ ಬೋಳಾ ವೆಂಕಟರಮಣ ನಾಯ್ಕ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ನನ್ನ ಅಜ್ಜ ಈರಾ ಯಾವಾಗ ಮೃತ ಹೊಂದಿದ್ದಾನೆ ಎಂದರೆ ಸಾಕ್ಷಿ 1983-84 ರಲ್ಲಿ ಮರಣ ಹೊಂದಿರಬಹುದು ಎಂದು ನುಡಿಯುತ್ತಾರೆ. ನಮ್ಮ ಕುಟುಂಬದ ಮೂಲ ಪುರುಷ ಈರಾ ಯಾನೆ ಬೋಳಾ ವೆಂಕಟರಮಣ ನಾಯ್ಕ ಎಂದರೆ ಸರಿ.

ನಾನು 10 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಇಂಗ್ಲೀಷ್ ಓದಲು, ಬರೆಯಲು ಸಾಧಾರಣವಾಗಿ ಬರುತ್ತದೆ. ನಮ್ಮ ಕುಟುಂಬದ ಮೂಲ ಮನೆ ಸರ್ವೆ ನಂ.107 ರಲ್ಲಿ ಇತ್ತು. ಸರ್ವೆ ನಂ.107 ರಲ್ಲಿ 3 ಹಿಸ್ಸೆಗಳು ಇದ್ದವು. ಆದರೆ ನಿಖರವಾಗಿ ಹಿಸ್ಸೆಗಳು ಹೇಳಲು ಬರುವುದಿಲ್ಲ. ಸದರಿ ಮನೆ ಹುಲ್ಲಿನ ಮನೆಯಾಗಿತ್ತು. ಸದರಿ ಮನೆಯ ಗ್ರಾಮ ಪಂಚಾಯತ್ ನವರು ನೀಡಿದ ಮನೆಯ ನಂಬರು ನನಗೆ ನೆನಪಿಲ್ಲ. ಆದರೆ ಅದಕ್ಕೆ ದಾಖಲೆ ಇದೆ ಅದನ್ನು ಹಾಜರುಪಡಿಸುತ್ತೇನೆ. ಸನ್ 1985 ವರೆಗೆ ನಾವೆಲ್ಲ ಒಟ್ಟು ಕುಟುಂಬದಲ್ಲಿ ಇದ್ದೆವು. ಸದರಿ ಮನೆ ಹುಲ್ಲಿನ ಮನೆಯಾಗಿತ್ತು, ಅದು ಮಳೆಯಿಂದ ಸೋರಿ ಹಾಳಾಗಿತ್ತು, ಹಾಗಾಗಿ ನನ್ನ ತಂದೆ ನನ್ನೊಂದಿಗೆ ವಾಸ ಮಾಡುತ್ತಿದ್ದರು. ಸನ್ 1985 ರವರೆಗೆ ನಮಗೆ ಒಟ್ಟು ಕುಟುಂಬದ ಪಡಿತರ ಚೀಟಿ

ಇತ್ತು. ಸದರಿ ಸನ್ 1985 ವರೆಗೆ ಪಡಿತರ ಚೀಟಿ ಮತ್ತು ಇತರ ದಾಖಲೆಗಳು ನನ್ನ ಬಳಿ ಇರುವುದಿಲ್ಲ. ಸನ್ 1985 ರ ನಂತರ ನಾನು ಬೇರೆ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದೆನು. ಆಗ ನನ್ನ ತಂದೆ ನನ್ನೊಂದಿಗೆ ವಾಸ ಮಾಡುತ್ತಿದ್ದರು. ನಾನು ಮನೆ ಕಟ್ಟಿದ ಮನೆ ಸ್ವತಂತ್ರವಾಗಿ ಖರೀದಿಸಿದ ಜಾಗದಲ್ಲಿ ಕಟ್ಟಿರುತ್ತೇನೆ. ಅದರ ಸರ್ವೆ ನಂ.36-ಬ ಎಂದು ಇರುತ್ತದೆ. ನಾನು ತಲಾ 1 ಗುಂಟೆಗೆ ರೂ.1,000/- ದಂತೆ 11 ಗುಂಟೆ ಖರೀದಿ ಮಾಡಿರುತ್ತೇನೆ. ಖರೀದಿ ದಸ್ತಾವೇಜು ನನ್ನ ಬಳಿ ಇರುತ್ತದೆ. ಅದನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಈ ದಾವೆ ಯಾವ ಕಾರಣಕ್ಕಾಗಿ ಏನು ಪರಿಹಾರ ಕೋರಿ ಸಲ್ಲಿಸಿದ್ದಾರೆ ಎಂದು ತಿಳಿದುಕೊಂಡಿರುತ್ತೇನೆ. ವಾದಿಯರು ಹಾಜರುಪಡಿಸಿದ ದಸ್ತಾವೇಜುಗಳನ್ನು ನೋಡಿ ತಿಳಿದುಕೊಂಡಿರುತ್ತೇನೆ. ನನ್ನ ತಂದೆ ತನ್ನ ಜೀವಿತಾವಧಿಯಲ್ಲಿ ಭಟ್ಕಳ ತಾಲ್ಲೂಕಿನ ಮಾವಳ್ಳಿ ಗ್ರಾಮದಲ್ಲಿ 2 ಎಕರೆ 12 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ, ಸಾಕ್ಷಿ ಮುಂದುವರಿದು ನನ್ನ ತಂದೆ ಮತ್ತು ದುರ್ಗಪ್ಪ ಜಂಟಿಯಾಗಿ ಖರೀದಿ ಮಾಡಿರುತ್ತಾರೆ. ಸದರಿ ಜಮೀನನ್ನು ಯಾರಿಂದ ಎಷ್ಟು ಹಣಕ್ಕೆ ಯಾವ ದಿನಾಂಕದಂದು ಖರೀದಿ ಮಾಡಿದ್ದರು ಎಂದು ಗೊತ್ತಿಲ್ಲ. ಖರೀದಿ ಮಾಡಿದ ಆಸ್ತಿಗಳೆಂದು ನನಗೆ ಆರ್.ಟಿ.ಸಿ ಪ್ರತಿ ನೋಡಿದಾಗ ಗೊತ್ತಾಗಿದೆ. ಸದರಿ ವಿಚಾರವು ನನಗೆ ಆರ್.ಟಿ.ಸಿ ನೋಡಿದ 10-12 ವರ್ಷಗಳ ನಂತರ ಗೊತ್ತಾಗಿದೆ. ನಾನು ಆರ್.ಟಿ.ಸಿ ನೋಡಿದ ನಂತರ ಖರೀದಿ ದಾಖಲೆ ಪತ್ರ ತೆಗೆದು ನೋಡಿರುವುದಿಲ್ಲ. ಖರೀದಿ ಮಾಡಿದ ಬಗ್ಗೆ ನನ್ನ ತಂದೆಯಿಂದ ತಿಳಿದುಕೊಂಡಿರುತ್ತೇನೆ. ನನ್ನ ತಂದೆಯವರು ಮರಣಹೊಂದುವ 10-15 ವರ್ಷಗಳ ಪೂರ್ವದಲ್ಲಿ ನನಗೆ ಖರೀದಿ ವಿಚಾರ ತಿಳಿಸಿದ್ದರು. ನನ್ನ ತಂದೆಯವರು ಖರೀದಿ ಮಾಡಿದ್ದಾರೆಂದು ಮತ್ತು ಅದು ನನಗೆ 15 ವರ್ಷದ ಪೂರ್ವದಲ್ಲಿ ಗೊತ್ತಾಯಿತು ಎಂದು ಪ್ರತಿವಾದ ಪತ್ರದಲ್ಲಿ ಹೇಳಿರುವುದಿಲ್ಲ. ಅದನ್ನು ಪ್ರತಿವಾದ ಪತ್ರದಲ್ಲಿ ಬರೆದು ಹಾಕಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಸದರಿ ಜಮೀನಿನ ಖರೀದಿ ಪತ್ರವನ್ನು ವಕೀಲರಿಗೆ ಕೊಡಲು ಏನಾದರೂ ತೊಂದರೆ ಇತ್ತಾ ? ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆರ್.ಟಿ.ಸಿ ಪ್ರತಿ ಮಾತ್ರ ನೀಡಿದ್ದೇನೆ ಎನ್ನುತ್ತಾರೆ. ನನ್ನ ತಂದೆ ಸದರಿ ಜಮೀನನ್ನು ಮಾಣಿ ಸಾಹೇಬರಿಂದ ಖರೀದಿ ಮಾಡಿದ್ದೆಂದು ಹೇಳಿರುತ್ತಾರೆ. ಆದರೆ ನನಗೆ ನಿಖರವಾದ ಹೆಸರು ಗೊತ್ತಿಲ್ಲ.

ನನ್ನ ತಂದೆ ಸೋಮಯ್ಯ ಮತ್ತು ಆತನ ತಮ್ಮ ದುರ್ಗಪ್ಪನ ನಡುವೆ ದಾವಾಸ್ತಿಗಳಲ್ಲಿ ವಿಭಾಗ ಪತ್ರವಾಗಿರಲಿಲ್ಲ. ದಾವಾಸ್ತಿಗಳಲ್ಲಿ ನನ್ನ ಅಜ್ಜ ಈರಯ್ಯ ಮತ್ತು ನನ್ನ ತಂದೆ ಸೋಮಯ್ಯ ಮತ್ತು ಆತನ ತಮ್ಮ ದುರ್ಗಪ್ಪನ ನಡುವೆ ಯಾವುದೇ ವಾಂಟಣೆ ಪತ್ರವಾಗಿರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಪ್ರತ್ಯೇಕ ಸಾಗುವಳಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ